ದಿನಾಂಕಃ 04/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎಸ್.ಎ. ವಕೀಲರಿಂದಃ

ನನ್ನ ತಂದೆಯು ಮೃತಪಟ್ಟು ಸುಮಾರು 50 ವರ್ಷಗಳು ಆಗಿದೆ. ನಮ್ಮ ತಂದಗೆ ನಾಲ್ಕು ಜನ ಮಕ್ಕಳು. ಅವರುಗಳೆಂದರೆ ಲಕ್ಕಪ್ಪಗೌಡ, ನಾನು, ರಾಜೇಗೌಡ, ಶಿವನಂಜೇಗೌಡ. ಅದರಲ್ಲಿ ನಮ್ಮ ಅಣ್ಣ ಲಕ್ಕಪ್ಪಗೌಡ ಮೃತಪಟ್ಟಿರುತ್ತಾರೆ. 2 ನೇ ಪ್ರತಿವಾದಿ ನನ್ನ ಅಣ್ಣ ಲಕ್ಕಪ್ಪನಗೌಡನ ಮಗ. ಪ್ರತಿವಾದಿ 3 ಮತ್ತು 4 ರವರು 2 ನೇ ಪ್ರತಿವಾದಿ ಮಕ್ಕಳು. 5 ನೇ ಪ್ರತಿವಾದಿ ಲಕ್ಕಪ್ಪಗೌಡನ ಮಗನ ಹೆಂಡತಿ. ಲಕ್ಕಪ್ಪಗೌಡ ಮೃತಪಟ್ಟು ಸುಮಾರು 7-8 ವರ್ಷ ಆಗಿದೆ.

ವಿಭಾಗಪತ್ರವನ್ನು ದಿನಾಂಕಃ 04.02.1975 ರಲ್ಲಿ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗಪತ್ರವನ್ನು ಊರಿನಲ್ಲಿ ಗ್ರಾಮದ ಮುಖಂಡರ ಸಮಕ್ಷಮ ಮಾಡಿಕೊಳ್ಳಲಾಗಿದೆ. ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ವಿಭಾಗಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಲು ತೊಂದರೆ ಇಲ್ಲ. ವಿಭಾಗದಲ್ಲಿ ನನಗೆ ಸರ್ವೆ ನಂಬರ್ 62/2 ರಲ್ಲಿ ನನಗೆ 25 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ 62/2 ರಲ್ಲಿ ಮತ್ತೆ 1 ಎಕರ 3 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ 4/1 ರಲ್ಲಿ 29 ಗುಂಟೆ ಬಂದಿರುತ್ತದೆ. ಸದರಿ ವಿಭಾಗದಲಿ ಲಕ್ಕಪ್ಪಗೌಡರವರಿಗೆ ಸರ್ವೆ ನಂಬರ್ 4/1 ರಲ್ಲಿ 26 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ 62/1 ರಲ್ಲಿ 13 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ 62/2 ರಲ್ಲಿ 5 ಗುಂಟೆ ಬಂದಿರುತ್ತದೆ. ಸರ್ವೆ ನಂಬರ್ 62/5 ರಲ್ಲಿ 8 ಗಂಟೆ ಬಂದಿರುತ್ತದೆ. ಶಿವನಂಜೇಗೌಡ ಮತ್ತು ರಾಜೇಗೌಡರವರಿಗೆ ಇದೇ ಸರ್ವೆ ನಂಬರ್ ನಲ್ಲಿ ಬೇರೆ ಬೇರೆ ವಿಸ್ತೀರ್ಣ ಬಂದಿರುತ್ತದೆ. ಅವರಿಗೆ ಎಷ್ಟೇಷ್ಟು ವಿಸ್ತೀರ್ಣ ಬಂದಿದೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 62/2 ರಲ್ಲಿ 1 ಎಕರೆ 3 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪನ ಮಗನಿಂದ ಕ್ರಯಕ್ಕೆ ತೆಗೆದುಕೊಂಡಿರುತ್ತೇವೆ ಸದರಿ ಜಮೀನು ಕ್ರಯಕ್ಕೆ ಯಾವ ಇಸವಿಯಲ್ಲಿ ತೆಗೆದುಕೊಂಡಿರುತ್ತೇವೆ ನೆನಪಿಲ್ಲ. ಸದರಿ 1 ಎಕರೆ 3 ಗುಂಟೆ ಜಮೀನನ್ನು ನನ್ನ ಹೆಂಡತಿ ಜಯಮ್ಮರವರ ಹೆಸರಿಗೆ ತೆಗೆದುಕೊಂಡಿರುತ್ತೇವೆ. ನನ್ನ ಮೊದಲನೇ ಹೆಂಡತಿ ಮೃತಪಟ್ಟ 15 ವರ್ಷ ಆಗಿದೆ. ನನ್ನ ಮೊದಲನೇ ಹೆಂಡತಿ ಮಗ ಜಿತೇಂದ್ರ. ಎರಡನೇ ಹೆಂಡತಿ ಜಯಮ್ಮರವರನ್ನು ಮೊದಲನೇ ಹೆಂಡತಿ ಬದುಕಿದ್ದಾಗಲೇ ಮದುವೆಯಾಗಿರುತ್ತೇನೆ. 2 ನೇ ಹೆಂಡತಿಗೆ ಸುಮಾರು 40 ವರ್ಷ ಆಗಿದೆ. 2 ನೇ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಪ್ರಕಾಶ್ ಬಿನ ಶಿವಣ್ಣ ನಮ್ಮ ಗ್ರಾಮದವರು. ಸರ್ವೆ ನಂಬರ್ 62/5 ರ ಜಮೀನಿಗೆ ಸಂಬಂಧಿಸಿದಂತೆ ಪಹಣಿಯನ್ನು ಹಾಕಿರುತ್ತೇನೆ. ನಿಪಿ-2 ರ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಿಪಿ-2 ರ ಜಮೀನನ್ನು 2000 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ ನಿಪಿ-4 ರ ಪ್ರಕಾರ

ಸಿದ್ದರಾಜೇಗೌಡ ಬಿನ್ ಸಿದ್ದೇಗೌಡ ಎಂದರೆ ನಾನೇ ಆಗಿರುತ್ತೇನೆ. ಅದರ ಪ್ರಕಾರ ನನಗೆ 25 ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮೀನು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ದಾಖಲೆಯಲ್ಲಿ ವಿಭಜನೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿರುತ್ತೇನೆ. ಸದರಿ ಬ್ಯಾಂಕ್ ನಲ್ಲಿ ಸಾಲವನ್ನು 10 ವರ್ಷದ ಹಿಂದೆ ಪಡೆದಿರುತ್ತೇನೆ. ಸದರಿ ಬ್ಯಾಂಕಿನಲ್ಲಿ ಸಾಲವನ್ನು ಕೃಷಿ ಅಭಿವೃದ್ಧಿಪಡಿಸಬೇಕಾಗಿ ಹಾಗೂ ಗೃಹ ಕೃತ್ಯಕ್ಕಾಗಿ ಸಾಲವನ್ನು ಪಡೆದಿರುತ್ತೇನೆ. ಈ ಸಾಲ ಪಡೆದುಕೊಂಡಿರುವ ಬಗ್ಗೆ ಲಕ್ಕಪ್ಪಗೌಡ, ಶಿವನಂಜೇಗೌಡ ಹಾಗೂ ರಾಜೇಗೌಡ ಅವರ ಮಕ್ಕಳುಗಳು ಯಾವುದೇ ರೀತಿಯ ತಕರಾರು ಮಾಡಿರುವುದಿಲ್ಲ.

ಸರ್ವೆ ನಂಬರ್ 62/2 ರಲ್ಲಿ 19 ಗುಂಟೆ ಜಮೀನು ನಾಗೇಗೌಡ ಬಿನ್ ನಾಗರಾಜೇಗೌಡರವರಿಗೆ ಬಂದಿರುತ್ತದೆ. ಅದು ಅವರಿಗೆ 1975 ರ ವಿಭಾಗಪತ್ರದ ಮೂಲಕ ಬಂದಿರುತ್ತದೆ. ಅದೇ ರೀತಿ ಅವರ ಹೆಸರಿಗೆ ಪಹಣಿ ಪತ್ರಿಕೆ ನಮೂದಾಗಿರುತ್ತದೆ. 1975 ರಲ್ಲಿ ಆಗಿರುವ ವಿಭಾಗಪತ್ರದಂತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 62/8 ರಲ್ಲಿ 3 ಗುಂಟೆ ಜಮೀನು 2 ನೇ ಮತ್ತು 5 ನೇ ಪ್ರತಿವಾದಿಗೆ ಬಂದಿರುತ್ತದೆ. ಸರ್ವೆ ನಂಬರ್ 4/1 ರಲ್ಲಿ ಸಿದ್ದರಾಜೇಗೌಡ ಬಿನ್ ಸಿದ್ದೇಗೌಡರವರಿಗೆ 29 ಗುಂಟೆ 1975 ರಲ್ಲಿ ಬಂದಿರುತ್ತದೆ. ಸದರಿ ಜಮೀನು 1975 ರಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಇದು ಐಸಿಆರ್ ಪ್ರಕಾರ ಬಂದಿರುತ್ತದೆ. 1989-90 ರಲ್ಲಿ ನಮ್ಮ ಕುಟುಂಬದಲ್ಲಿ ಯಾರು ಮೃತಪಟ್ಟಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ